ಹುದ್ದೆ ಖಾಲಿ ಇರುತ್ತದೆ. ತಾತ್ಕಾಲಿಕವಾಗಿ ಉಪನ್ಯಾಸಕರನ್ನು ನೇಮಿಸಿಕೊಂಡು ಕೊರತೆ ನೀಗಿಸಲಾಗಿದೆ.

ದೊಡ್ಡಣ್ಣಗೆರೆಯಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಸಧ್ಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆಸಲಾಗುತಿದೆ. ಈ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರ ಹುದ್ದೆ ಖಾಲಿ ಇರುತ್ತದೆ. ತಾತ್ಕಾಲಿಕವಾಗಿ ಉಪನ್ಯಾಸಕರನ್ನು ನೇಮಿಸಿಕೊಂಡು ಕೊರತೆ ನೀಗಿಸಲಾಗಿದೆ. ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯು ಕೆ.ಪಿ.ಎಸ್..ಸಿ ಯಲ್ಲಿ ನಡೆಯುತ್ತಿದ್ದು, ಆಯ್ಕೆ ಪ್ರಕ್ರಿಯೆ ಮುಗಿದ ಕೂಡಲೇ ಕೊರತೆ ಇರುವ ಕಡೆ ಉಪನ್ಯಾಸಕರುಗಳನ್ನು ಭರ್ತಿ ಮಾಡಲಾಗುವುದು.

ಮೇಲ್ಕಂಡ ಬರಗೂರುಬೆಳಗಲಿ, ಹುಳಿಯಾರ ಮತ್ತು ದೊಡ್ಡಣ್ಣಗೆರೆ ಪದವಿ ಪೂರ್ವ ಕಾಲೇಜುಗಳಿಗೆ ನಿವೇಶನದ ಕೊರತೆಯಿಂದಾಗಿ ಕಟ್ಟಡವನ್ನು ಒದಗಿಸಲು ತೊಂದರೆಯಾಗಿರುತ್ತದೆ.

ಇ. ಮುಂದಿನ ಎಷ್ಟು ದಿನದೊಳಗೆ ಈ ಕೊರತೆಗಳನ್ನು ಸರಿಪಡಿಸಲಾಗುವುದು?

ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ನಿವೇಶನಗಳು ಲಭ್ಯವಾದ ಕೂಡಲೇ ಮುಂದಿನ ವರ್ಷಗಳಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ಕಟ್ಟಡ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಯೋಜನೆಗಳನ್ನು ಹಾಕಿ ಕೊಳ್ಳಲಾಗುವುದು.

ಇಡಿ : 42 : ಯೋಸಕ 2009 **ಉನ್ನತ ಶಿಕ್ಷಣ ಸಚಿವರು**

ಕರ್ನಾಟಕ ವಿಧಾನ ಸಭೆ

180 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ [ಗೌರಿಬಿದನೂರು]

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ. ಗೌರಿಬಿದನೂರು ತಾಲ್ಲೂಕಿನಲ್ಲಿರುವ ಸರ್ಕಾರಿ ಹಿರಿಯ, ಕಿರಿಯ, ಪ್ರೌಢಶಾಲೆಗಳ ಸಂಖ್ಯೆ ಎಷ್ಟು; ಈ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಗೌರಿಬಿದನೂರು ತಾಲ್ಲೂಕಿನಲ್ಲಿ

ಕ್ರ.ಸ	ಶಾಲಾ ಹಂತ	ಶಾಲೆಗಳ ಸಂಖ್ಯೆ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
1	ಸರ್ಕಾರಿ ಕಿರಿಯ ಪ್ರಾ.ಶಾಲೆ	202	36438
2	ಸರ್ಕಾರಿ ಹಿರಿಯ ಪ್ರಾ.ಶಾಲೆ	109	

3	ಸ.ಪ್ರೌಢಶಾಲೆ	21	

ಆ. ಗೌರಿಬಿದನೂರು ತಾಲ್ಲೂಕಿನಲ್ಲಿ ಸರ್ಕಾರಿ ಕಿರಿಯ, ಹಿರಿಯ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದರೂ ಸಹ ಇವರುಗಳಿಗೆ ಸರಿಯಾದ ಕೊಠಡಿಯ ಸೌಕರ್ಯವು ಇಲ್ಲದೇ ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಈ ಕೆಳಕಂಡ ಶಾಲೆಗಳಿಗೆ ಕೊಠಡಿಗಳ ಕೊರತೆ ಇರುತ್ತದೆ.

ಸ.ಪ್ರೌ.ಶಾಲೆ ಆಲೀಪುರ 6 ಕೊಠಡಿಗಳು.

ಸ.ಪ್ರೌ.ಶಾಲೆ ವಾಟದ ಹೊಸಹಳ್ಳಿ 6 ಕೊಠಡಿಗಳು

ಸ.ಪ್ರೌ.ಶಾಲೆ ಹುದುಗೂರು 4 ಕೊಠಡಿಗಳು

ಸ.ಪ್ರೌ.ಶಾಲೆ ರಮಾಪುರ 3 ಕೋಠಡಿಗಳು.

ಇ. ಹಾಗಿದ್ದರೆ, ಇದರ ನಿವಾರಣೆಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು; 2006–07, 2007–08, ಮತ್ತು 2008–09 ರಲ್ಲಿ ಈ ಶಾಲೆಗಳ ಅಭಿವೃದ್ಧಿಗೆ ಸರ್ಕಾರವು ಬಿಡುಗಡೆ ಮಾಡಲಾದ ಅನುದಾನವೆಷ್ಟು;

ಸ.ಪ್ರೌ.ಶಾಲೆ ವಾಟದ ಹೊಸಹಳ್ಳಿ, ಇಲ್ಲಿಗೆ ಆರ್.ಐ.ಡಿ.ಎಫ್–14ರಡಿ 18.70ಲಕ್ಷರೂಗಳ ವೆಚ್ಚದಲ್ಲಿ 4 ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಪ್ರಸ್ತಾಪಿಸಿದ್ದು, ನಬಾರ್ಡ್‌ನ ಅನುಮೋದನೆ ದೊರೆತ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಮುಂದಿನ ವರ್ಷಗಳಲ್ಲಿ ಉಳಿದ ಶಾಲೆಗಳಿಗೆ ಅನುದಾನದ ಲಭ್ಯತೆಯನ್ನು ಆಧರಿಸಿ ಕೊಠಡಿಗಳನ್ನು ನಿರ್ಮಿಸಲಾಗುವುದು.

ಈ. ಈ ಶಾಲೆಗಳ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ತುಂಬಲು ಸರ್ಕಾರವು ಕೈ ಗೊಳ್ಳುವ ಕ್ರಮವೇನು?

ಶಿಕ್ಷಕರ ಕೊರತೆ ಇರುವುದಿಲ್ಲ.

ಇಡಿ:52:ಯೋಸಕ 2009 **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.**